## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2074
ಸದಸ್ಯರ ಹೆಸರು : ಶ್ರೀ ಪ್ರತಾಪಸಿಂಹ ನಾಯಕ್ ಕೆ.
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 25.03.2026
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆ ಮಾಡುವಾಗ ಸರ್ಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಜಮೀನು ಭೂ ಪರಿವರ್ತನೆ ಮಾಡಬಾರದು ಮತ್ತು ಭೂ ಪರಿವರ್ತನೆಗೊಳಿಸುವ ಅಲಿನೇಷನ್ ಪೂರ್ವ ನಕ್ಷೆಯಲ್ಲಿ ಸರ್ಕಾರಿ ಸಂಪರ್ಕ ರಸ್ತೆಯನ್ನು ತೋರಿಸಬೇಕು ಮತ್ತು ಯಾವುದೇ ಖಾಸಗಿ ಸಂಪರ್ಕ ರಸ್ತೆಯ ಬಗ್ಗೆ ತೋರಿಸಬಾರದು ಎಂಬ ಆದೇಶದಿಂದಾಗಿ ಸಾಕಷ್ಟು ಅರ್ಜಿದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭೂಪರಿವರ್ತಿಸಲಾದ ಜಮೀನಿಗೆ ಸಂಬಂಧಿಸಿದಂತೆ ರಸ್ತೆ ವಿಷಯವಾಗಿ ಯಾವುದೇ ರೀತಿ ವಿವಾದಗಳು ಉದ್ಭವಿಸಿದಲ್ಲಿ ಅದಕ್ಕೆ ಅರ್ಜಿದಾರರೇ ಪರಿಹಾರ ಕಂಡುಕೊಳ್ಳತಕ್ಕದ್ದು ಎಂದು ಹೆಚ್ಚುವರಿ ಷರತ್ತು ವಿಧಿಸುವ ಮೂಲಕ ನಿಯಮಾನುಸಾರ ಭೂಪರಿವರ್ತನಾ ಆದೇಶ ನೀಡಲಾಗುತ್ತಿದೆ. ಅದರಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಇಂತಹ ಪ್ರಕರಣಗಳು ಕಂಡು ಬಂದಿರುವುದಿಲ್ಲ. |
| (ಆ) | ಬಂದಿದ್ದಲ್ಲಿ, ಜಮೀನಿನ ಒಂದು ಭಾಗದಲ್ಲಿ ಭೂ ಪರಿವರ್ತನೆಗೊಳಿಸುವ ಸಂದರ್ಭದಲ್ಲಿ ಸರ್ಕಾರಿ ರಸ್ತೆಯ ವ್ಯವಸ್ಥೆ ಇಲ್ಲದ ಜಮೀನಾಗಿದ್ದಲ್ಲಿ ಅರ್ಜಿದಾರರಿಗೆ ಅವರ ಜಮೀನು ಪರಿವರ್ತಿಸುವ ಅವಕಾಶವೇ ಇಲ್ಲದಂತಾಗಿ ಜಮೀನಿಗೆ ಸಂಪರ್ಕ ರಸ್ತೆ ಕಾಣಿಸದ ಪಕ್ಷದಲ್ಲಿ ಅವರು ಭೂ ಪರಿವರ್ತನೆಯಿಂದ ವಂಚಿತರಾಗುವ ಸಮಸ್ಯೆ ಅಧಿಕವಾಗಿರುವುದರಿಂದ ಇದನ್ನು ಪರಿಹರಿಸಲು ಸರ್ಕಾರ ಏನು ಕ್ರಮ ವಹಿಸಿದೆ; | |
| (ಇ) | ದಕ್ಷಿಣ ಕನ್ನಡ ಜಿಲ್ಲೆಯ ಭೌಗೋಳಿಕ ಅಧ್ಯಯನ ಮತ್ತು ಜನಜೀವನ ವ್ಯವಸ್ಥೆಯನ್ನು ಪರಿಗಣಿಸಿ, ಭೂ ಪರಿವರ್ತನೆ ಮಾಡುವಾಗ ಸರ್ಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸಿ ಜನರಿಗೆ ಆಗುತ್ತಿದ್ದ ತೊಂದರೆಯನ್ನು ನಿವಾರಿಸಲು ಸರ್ಕಾರ ಸೂಕ್ತ ಹಾಗೂ ಅಗತ್ಯ ಕ್ರಮ ವಹಿಸುವುದೇ? | |

(ಕಡತ ಸಂಖ್ಯೆ: ಆರ್‌ಡಿ 37 ಎಲ್‌ಜಿಎ 2026)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು